# ಮುಂಗುಸಿ ಮತ್ತು ನಾಗರ ಹಾವು



ಅಮ್ಮನ ಜೊತೆಯಲಿ ಹೋಗಿದ್ದೆ ನಾನು
ಅಜ್ಜನ ಊರಿಗೆ
ಅಜ್ಜನ ಊರದು ನೋಡಲು ಚಂದ
ಹಿಡಿಸಿತು ಮನಸಿಗೆ

ಬೆಳಗಿನ ಹೊತ್ತಲಿ ನನ್ನನು ಅಜ್ಜ
ಒಯ್ದನು ಗದ್ದೆಗೆ
ರಾಗಿಯ ತೋರುತ ಹೇಳಿದ ನನಗೆ
ಬೇಕಿದು ಮುದ್ದೆಗೆ

ಅಜ್ಜನ ಮಾತಿಗೆ ಹಿಗ್ಗುತ ಮುಂದೆ
ಹೆಜ್ಜೆಯ ಹಾಕಿದೆ
ಗದ್ದೆಗೆ ಹಾಕಿದ ಬೇಲಿಯ ಕಡೆಗೆ
ನೋಟವ ಬೀರಿದೆ

ಗದ್ದೆಯ ಅಂಚಿನ ಬೇಲಿಯ ಬದಿಯಲಿ
ಕಂಡಿತು ನಾಗರವು
ಗಾಬರಿಯಿಂದಲಿ ನೋಡುತಲಿರಲು
ಬಂದಿತು ಮುಂಗುಸಿಯು

ಮುಂಗುಸಿ ನಾಗರ ದ್ವೇಷವ ತೊರೆದು
ಮುದ್ದನು ಮಾಡುತಲಿ
ಆಡುತಲಿದ್ದವು ಅಪ್ಪುಗೆ ಬೆಸೆದು
ಒಪ್ಪುವ ಪ್ರೀತಿಯಲಿ

ಸೋಜಿಗದಿಂದಲಿ ಕಾಣುತಲಿದ್ದೆ
ಅಲ್ಲಿನ ಆಟವನು
ಹೀಗೂ ಉಂಟೇ! ಎನ್ನುವ ಹಾಗೆ
ಕಂಡಿತು ದೃಶ್ಯವದು

ನಿನ್ನಯ ಬೆರಗಿಗೆ ಹೇಳುವೆ ಪುಟ್ಟ
ಕಾರಣ ನೀ ಕೇಳು
ಪಾವನ ಕ್ಷೇತ್ರವು ಶೃಂಗೇರಿಯಲ್ಲಿ
ನಡೆದಾ ಘಟನೆಯನು

ಬಿಸಿಲಿಗೆ ಬಳಲಿದ ಕಪ್ಪೆಗೆ ಸರ್ಪ
ಅಗಲಿಸಿ ಹೆಡೆಯನ್ನು
ಕಪ್ಪೆಯ ಪ್ರಾಣವ ರಕ್ಷಿಸಲೆಂದು
ನೀಡಿತು ನೆರಳನ್ನು

ಅಂದಿನ ಪವಾಡ ಇಂದಿಗೆ ಸಾಕ್ಷಿ
ನಡೆದಿದೆ ಮತ್ತೊಂದು
ಸುಡುಸುಡು ಬಿಸಿಲಲಿ ಮುಂಗುಸಿ ನರಳಿ
ಸಾಯುತಲಿದ್ದಿತ್ತು

ನೋಡಿದ ನಾಗರ ಹತ್ತಿರ ಬಂದು
ನೆರಳನು ಮಾಡಿತ್ತು
ಮೆಲ್ಲನೆ ಹೆಡೆಯನು ಅಗಲಿಸಿ ಅದಕೆ
ಚಾಮರ ಬೀಸಿತ್ತು

ಸಂಕಟ ಸಮಯದಿ ಮುಂಗುಸಿ ಪ್ರಾಣ
ನಾಗರ ಉಳಿಸಿತ್ತು
ಮುಂಗುಸಿ ನಾಗರ ಹಾವಿನ ಸ್ನೇಹ
ಅಂದಿಗೆ ಬೆಸೆದಿತ್ತು

ಆಗಿನಿಂದಾ ಇಂದಿನ ತನಕವೂ
ಮುಂಗುಸಿ ನಾಗರವು
ಒಬ್ಬರಿಗೊಬ್ಬರು ಬಿಟ್ಟಿರದಂತೆ
ಬಾಳುತಲಿರುವವು

ಅಜ್ಜನ ಮಾತನು ಕೇಳಿದ ಪುಟ್ಟ
ಹಿರಿಹಿರಿ ಹಿಗ್ಗಿದನು
ಮುಂಗುಸಿ ಹಾವಿನ ಮತ್ತೊಂದು ಕತೆಯ
ಮನದಲಿ ತುಂಬಿದನು.

**– ಸೋಮಲಿಂಗ ಬೇಡರ, ಆಳೂರ**

## ನಿಮಗೆಷ್ಟು ಗೊತ್ತು

## ಅಕ್ಟೋಪಸ್‌ನ ವಿಚಿತ್ರ ಜೀವನ



ಹೆಣ್ಣು ಅಕ್ಟೋಪಸ್‌ಗಳೊಂದಿಗೆ ಸೇರಲು ಗಂಡು ಅಕ್ಟೋಪಸ್‌ಗಳು ಪರಸ್ಪರ ಸ್ಪರ್ಧಿಸುತ್ತವೆ. ಬಣ್ಣಗಳನ್ನು ಹೊಮ್ಮಿಸುತ್ತ ಹೆಣ್ಣು ಅಕ್ಟೋಪಸ್‌ನೊಂದಿಗೆ ಸೇರಲು ತಾನೇ ಸರ್ವಶ್ರೇಷ್ಠವೆಂದು ಸಾರುತ್ತದೆ. ಗಂಡು ಅಕ್ಟೋಪಸ್‌ಗಳ ಸಂಖ್ಯೆ ಹೆಣ್ಣು ಅಕ್ಟೋಪಸ್‌ಗಳಿಗಿಂತ ದುಪ್ಪಟ್ಟಿರುತ್ತದೆ. ಫಲಿತಗೊಂಡ ಮೊಟ್ಟೆಗಳನ್ನು ತಾವು ವಾಸಿಸುವ ಪೊಟರೆಯ ಮೇಲ್ಭಾಗದಲ್ಲಿ ಜೋಡಿಸುತ್ತವೆ. ಮೊಟ್ಟೆಗಳು ಸಾವಿರಾರು ಸಂಖ್ಯೆಯಲ್ಲಿರುತ್ತವೆ. ಇವು ಸುತ್ತಲಿನ ನೀರನ್ನು ಶುದ್ಧಗೊಳಿಸುವ ಮೂಲಕ ಮೊಟ್ಟೆಗಳಿಗೆ ಕೊಳಕು ಸೋಕದಂತೆ ನಿಗಾವಹಿಸುತ್ತವೆ. ಗಂಡು ಜೀವಿಯು ಸಂತಾನೋತ್ಪತ್ತಿಗೆ ಕಾರಣವಾಗುವ ಹಾರ್ಮೋನುಗಳನ್ನು ಸ್ರವಿಸಿದ ಎರಡು ತಿಂಗಳಲ್ಲೇ ಪ್ರಾಣಬಿಡುತ್ತದೆ. ಮೊಟ್ಟೆಯಿಂದ ಮರಿಗಳು ಹೊರಬರುವ ಸಂದರ್ಭದಲ್ಲಿ ಹೆಣ್ಣು ಜೀವಿಯು ಸಾವನ್ನಪ್ಪುತ್ತದೆ. ಹಾಗೆ ಮೊಟ್ಟೆಯಿಂದ ಮರಿಗಳು ಹೊರಬರುವಾಗ ಹೆಣ್ಣು ಜೀವಿಯು ಬೇಟೆಯಾಡುವುದಿಲ್ಲ. ಬದಲಿಗೆ ಹಸಿವನ್ನು ತೀರಿಸಿಕೊಳ್ಳಲು ತನ್ನ ಬಾಹುಗಳನ್ನೇ ಆಹಾರವನ್ನಾಗಿ ಸೇವಿಸುತ್ತದೆ.

**–ಪ.ನಾ.ಹಳ್ಳಿ.ಹರೀಶ್ ಕುಮಾರ್**